# Kannada Open Elective

## ಮಾದರಿ ಪ್ರಶ್ನಪತ್ರಿಕೆ

ಸಮಯ:೨ ಗಂಟೆಗಳು ಅಂಕಗಳು:೬೦

**ಅ. ಸೂಚನೆಗನುಗುಣವಾಗಿ ಬರೆಯಿರಿ: ೨*೫=೧೦**

**೧. ಬೆಣ್ಣೆ ಹಚ್ಚು, ಮೈಯೆಲ್ಲಾ ಕಣ್ಣಾಗು - ನುಡಿಗಟ್ಟುಗಳನ್ನು ಬಳಸಿ ವಾಕ್ಯರಚನೆ ಮಾಡಿ.**

**೨.ಕೊಟ್ಟಿರುವ ವಾಕ್ಯಗಳನ್ನು ಸರಿಯಾಗಿ ಜೋಡಿಸಿ ಬರೆಯಿರಿ.**

**ಮೇಲೆ ಹಕ್ಕಿ ಆ ಕುಳಿತಿದೆ ಮರದ ಒಂದು**

**ಅತಿ ಭಾಷೆಗಳಲ್ಲಿ ಪ್ರಾಚೀನವಾದ ಕನ್ನಡ ದ್ರಾವಿಡ ಭಾಷೆ**

**೩.ವಾಕ್ಯದಲ್ಲಿರುವ ಅಕ್ಷರ ದೋಷಗಳನ್ನು ಸರಿಪಡಿಸಿ ಬರೆಯಿರಿ:**

**ರ್ಕನಾಟಕದಲ್ಲಿ ಪ್ರಾಛೀನ ಖಾಲದಿಂದಲೂ ಖೆರೆಗಳು ಆಸ್ಥಿತ್ವದಲ್ಲಿವೆ.**

**ಈ ಆದರ್ಶವನ್ನು ದ್ರಷ್ಟೀಯಲ್ಲಿರಿಸಿಕೊಂಡು ಆಸಾದ್ಯವೆಂದು ಬೆಧರಬೇಕಾಗಿಲ್ಲ**

**೪. ಕೊಟ್ಟಿರುವ ವಾಕ್ಯಗಳಲ್ಲಿ ಆಗತ್ಯವಿರುವ ಲೇಖನ ಚಿಹ್ನೆಗಳನ್ನು ಬಳಸಿ ಬರೆಯಿರಿ:**

**ಕಥನವನ್ನು ನೀಡುವವರು ಯಾರು ವ್ಯಕ್ತಿಯೋರ್ವನಿಂದ ಕಥನ ಹೊಮ್ಮುತ್ತದೆ**

**ಅಬ್ಬಾ ಹಾವನ್ನು ಕಂಡಷ್ಟೇ ಭಯವಾಯಿತು**

**೫. ಗ್ರಾಮ್ಯ ರೂಪದಲ್ಲಿರುವ ಈ ವಾಕ್ಯಗಳನ್ನು ಗ್ರಾಂಧಿಕ ರೂಪದಲ್ಲಿ ಬರೆಯಿರಿ:**

**ಏನಲಾ ಊರ್ಕಡಿ ಬರ್ನೇಯಿಲ್ಲ**

**ಪ್ಯಾಟಿಕಾ ಹೋಗಿದ್ನಿ ಅವ್ನತಾವಾ ಏನೂ ಇರ್ನಿಲ್ಲ**

**ಆ. ಕೊಟ್ಟಿರುವ ಗಾದೆ ಮಾತುಗಳಿಗೆ ಅರ್ಥ ಮತ್ತು ಸ್ವಾರಸ್ಯವನ್ನು ವಿವರಿಸಿ: ೨*೫=೧೦**

**೧. ದೇಶ ನೋಡು,ಕೋಶ ಓದು**

**೨. ಹತ್ತು ಕಟ್ಟುವ ಕಡೆ ಒಂದು ಮುತ್ತು ಕಟ್ಟು**

ಇ. ಕೊಟ್ಟಿರುವ ವಿಷಯಗಳಿಗೆ ಹತ್ತು ವಾಕ್ಯಗಳಲ್ಲಿ ಟಿಪ್ಪಣಿ ಬರೆಯಿರಿ : ೨*೫=೧೦

೧. ನೀರಿನ ಸಂರಕ್ಷಣೆ ೨. ಮೊಬೈಲ್ ಬಳಕೆ

ಈ.ಕೊಟ್ಟಿರುವ ಭಾಗವನ್ನು ಮೂರನೇ ಒಂದು ಭಾಗಕ್ಕೆ ಸಂಕ್ಷಿಪ್ತಗೊಳಿಸಿ ಬರೆಯಿರಿ: ೧*೧೦=೧೦

ಕೃಷಿ ಕ್ಷೇತ್ರದಲ್ಲಿ ಮೊದಲು ಕೆರೆಗಳು , ಬಾವಿಗಳು ಪ್ರಮುಖ ಪಾತ್ರ ವಹಿಸಿದ್ದವು. ಆದರೆ ಈಗ ಆ ಸ್ಥಾನವನ್ನು ಕೆರೆಗಳು, ಬೋರ್ ವೆಲ್ ಗಳು, ಪಡೆದುಕೊಂಡಿವೆ. ಕೆಲವು ವರ್ಷಗಳಿಂದೀಚೆಗೆ ಕೆರೆಗಳೆಲ್ಲಾ ಹೂಳು ತುಂಬಿ,ಜೊಂಡು ಬೆಳೆದು ನೀರಿನ ಸಂಗ್ರಹಣಾ ಸಾಮರ್ಥ್ಯವೇ ನಶಿಸಿದೆ. ಈಗಲೂ ಅನೇಕ ಕೆರೆಗಳು ಪ್ರತಿ ವರ್ಷ ನಿರುಪಯುಕ್ತವಾಗುತ್ತಿವೆ. ನಗರ ಮತ್ತು ಪಟ್ಟಣ ಪ್ರದೇಶಗಳಲ್ಲಿದ್ದ ಅನೇಕ ಕೆರೆಗಳು ಈಗ ಮುಚ್ಚಿಹೋಗಿವೆ. ಒಂದು ಕಾಲಕ್ಕೆ ಊರಿನ ನಿರ್ಮಾಣದ ಜೊತೆಗೆ ಕೆರೆಯ ನಿರ್ಮಾಣವಾಗುತ್ತಿತ್ತು. ಕೆರೆಯಿಲ್ಲದ ಊರು ಅಪರೂಪವಾಗಿತ್ತು. ಈಗ ಕೆರೆಯನ್ನು ಮುಚ್ಚಿ ಊರಿನ ನಿರ್ಮಾಣವಾಗುವ ಪ್ರಸಂಗ ಬಂದಿದೆ. ಅಂತರ್ಜಲ ಮಟ್ಟ ಕುಸಿಯಲು ಇದೂ ಒಂದು ಕಾರಣ. ಕರ್ನಾಟಕದಲ್ಲಿ ಅತಿ ಹೆಚ್ಚು ಸಂಖ್ಯೆಯ ಕೆರೆಗಳು ಶಿವಮೊಗ್ಗ ಜಿಲ್ಲೆಯಲ್ಲಿದ್ದು,ಬೀದರ್ ಜಿಲ್ಲೆಯಲ್ಲಿ ಕೆರೆಗಳ ಸಂಖ್ಯೆ ಅತ್ಯಂತ ಕಡಿಮೆ ಇವೆ. ಇವುಗಳ ನಿರ್ಮಾಣ, ಪ್ರಾಮುಖ್ಯತೆ , ರಕ್ಷಣೆ, ನಿರ್ವಹಣೆಯ ಬಗ್ಗೆ ಯಾರೂ ಸರಿಯಾದ ಗಮನ ಹರಿಸುತ್ತಿಲ್ಲ ಎಂಬುದು ನೋವಿನ ಸಂಗತಿ. ಬ್ರಿಟಿಷರ ಕಾಲದಲ್ಲೂ ಕೆರೆಗಳ ನಿರ್ಮಾಣ ಮತ್ತು ನಿರ್ವಹಣೆ ಉತ್ತಮವಾಗಿಯೇ ಇತ್ತು. ಮಳೆಯ ನೀರನ್ನೇ ಆಶ್ರಯಿಸಿರುವ ಕೆರೆಗಳ ಬದಲಿಗೆ ಕ್ರಮೇಣ ಬೋರ್ ವೆಲ್ ಗಳು ಹೆಚ್ಚು ಉಪಯುಕ್ತ ಎನಿಸಿದ ಕಾರಣದಿಂದಲೂ ಕೆರೆಗಳ ಉಸ್ತುವಾರಿಯ ಬಗೆಗೆ ಗಮನ ಕಡಿಮೆಯಾಯಿತು. ತಾಲ್ಲೂಕು ಅಭಿವೃದ್ಧಿ ಮಂಡಲಿ ಮತ್ತು ಲೋಕೋಪಯೋಗಿ ಇಲಾಖೆಗಳ ನಿಯಂತ್ರಣಕ್ಕೆ ಸೇರಿದ ಕೆರೆಗಳು ಕ್ರಮೇಣ ಉಪೇಕ್ಷೆಗೆ ಗುರಿಯಾಗಿವೆ. ಈಗ ಹೊಸದಾಗಿ ಕೆರೆಗಳನ್ನು ನಿರ್ಮಿಸುವುದು ನಿರುತ್ತೇಜಕ ಎನಿಸಿದರೆ, ಇರುವ ಕೆರೆಗಳನ್ನಾದರೂ ದುರಸ್ತಿ ಮಾಡಿ ಅವುಗಳ ಸದುಪಯೋಗ ಮಾಡಿಕೊಳ್ಳುವುದು ಎಲ್ಲಾ ರೀತಿಯಲ್ಲೂ ಉತ್ತೇಜಕವಾದುದು.

ಉ.ಕೊಟ್ಟಿರುವ ವಿಷಯಗಳಲ್ಲಿ ಒಂದನ್ನು ಆಯ್ಕೆಮಾಡಿಕೊಂಡು ಪತ್ರ ಬರೆಯಿರಿ: ೧*೧೦=೧೦

೧.ನಿಮ್ಮ ವಲಯದಲ್ಲಿರುವ ಗ್ರಂಥಾಲಯ ಮೂಲ ಸೌಕರ್ಯಗಳಿಲ್ಲದೆ ಸೊರಗುತ್ತಿರುವುದನ್ನು ಕುರಿತು ಗ್ರಂಥಾಲಯ ಇಲಾಖೆಗೆ ಒಂದು ಪತ್ರ ಬರೆಯಿರಿ.

೨. ನಿಮ್ಮೂರಿಗೆ ಸರ್ಕಾರಿ ಪದವಿ ಕಾಲೇಜೊಂದು ಮಂಜೂರಾತಿ ಮಾಡುವಂತೆ ಮಾನ್ಯ ಉನ್ನತ ಶಿಕ್ಷಣ ಸಚಿವರಿಗೊಂದು ಪತ್ರ ಬರೆಯಿರಿ.

ಊ. ಕೊಟ್ಟಿರುವ ವಿಷಯಗಳಲ್ಲಿ ಒಂದನ್ನು ಕುರಿತು ಇಪ್ಪತ್ತು ವಾಕ್ಯಗಳಿಗೆ ಮೀರದಂತೆ ಪ್ರಬಂಧ ಬರೆಯಿರಿ: ೧*೧೦=೧೦

೧.ಪ್ರಾಥಮಿಕ ಶಿಕ್ಷಣ ಆಯಾ ಪ್ರಾದೇಶಿಕ ಭಾಷೆಯಲ್ಲಿಯೇ ಆಗಬೇಕು.

೨.ಸುದ್ಧಿ ಮಾಧ್ಯಮಗಳ ಮೇಲೆ ನಿಯಂತ್ರಣ

*********